2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 13/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - ಕಮಲಮ್ಮ | | ಪಿಡಬ್ಲೂ - 11 |
| ಗಂಡನ ಹೆಸರು | - ಉಮಾಶಂಕರ | | ಸಿಡಬ್ಲೂ - 16 |
| ವಯಸ್ಸು | - 36 ವರ್ಷ | | |
| ಉದ್ಯೋಗ | - ಗೃಹಿಣಿ | | |
| ವಾಸ ಸ್ಥಳ | - ಹಳೇಪೇಟೆ, ಕಡೂರು | | |

ದಿನಾಂಕಃ **21.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತ ನನ್ನ ಗಂಡ. ಚಾಸಾ.1 ರವರು ಪರಿಚಯ ನನಗಿಲ್ಲ. ಮೃತ ಮಗು ಲೋಲಾಕ್ಷಿ ಗೊತ್ತಿಲ್ಲ.

2. ನನ್ನ ಮತ್ತು ಆರೋಪಿತನ ಮದುವೆ ಸುಮಾರು 12 ವರ್ಷಗಳ ಹಿಂದೆ ಕಡೂರಿನ ಮಲ್ಲೇಶ್ವರ ದಲ್ಲಿ ನಡೆದಿತ್ತು. ನಮ್ಮದು ಹಿರಿಯರು ನಿಶ್ಚಯಿಸಿದ ಮದುವೆ. ನಮಗೆ 11 ವರ್ಷಗ ಗಂಡು ಮಗು ಇದೆ. ಆರೋಪಿ ಕಡೂರು ನ್ಯಾಯಾಲಯದಲ್ಲಿ ವಕೀರ ವೃತ್ತಿ ಮಾಡುತ್ತಿರುತ್ತಾರೆ.

3. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರಲ್ಲಿ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ಆರೋಪಿತನು ಈ ಪ್ರಕರಣದ ಕೃತ್ಯ ನಡೆಯುವ ಎರಡು ವರ್ಷಗಳಿಂದ ನಮ್ಮ ಮನೆಗೆ ಬರುವುದು ಕಡಿಮೆ ಮಾಡಿದ್ದು ನಂತರ ನನಗೆ ಆರೋಪಿತ ಚಾಸಾ.1 ರವರ ಜೊತೆ 2 ನೇ ಮದುವೆ ಆಗಿರುವ ವಿಚಾರ ನನಗೆ ತಿಳಿಯಿತು

ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಆರೋಪಿತನನ್ನು ಪ್ರಶ್ನಿಸಿದಾಗ ಅವರು ಏನೇನೋ ನೆಪ ಹೇಳಿ ಸುಮ್ಮನಾಗುತ್ತಿದ್ದರು ಎಂದರೆ ಸರಿಯಲ್ಲ. ನಂತರ ಆರೋಪಿತನು ನನ್ನ ಮನೆಗೆ ಸರಿಯಾಗಿ ಸಾಮಾನುಗಳನ್ನು ತಂದು ಹಾಕಿ ಯಾವುದೇ ತೊಂದರೆ ನೀಡದೆ ಇದ್ದುದರಿಂದ ನಾನು ಸಹ ಸುಮ್ಮನಾಗಿ ಸಂಸಾರ ಹಾಳಾಗುವುದು ಬೇಡವೆಂದು ಜೀವನ ನಡೆಸುತ್ತಿದ್ದೆ ಎಂದರೆ ಸರಿಯಲ್ಲ.

5. ದಿಃ 10.09.2020 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನನಗೆ ಮಾಹಿತಿ ತಿಳಿದು ಆರೋಪಿತನು ಚಾಸಾ.1 ರವರೊಂದಿಗೆ ಹೆಣ್ಣುಮಗು ಜನನವಾದ ವಿಚಾರದಲ್ಲಿ ಜಗಳ ತೆಗೆದು ಚಾಸಾ.1 ರವರು ಕೋರ್ಟ ಕರ್ತವ್ಯದಲ್ಲಿದ್ದ ಸಮಯದಲ್ಲಿ ಅವರಿಗೆ ಜನಿಸಿದ ಹೆಣ್ಣುಮಗು ಲೋಲಾಕ್ಷಿಯನ್ನು ಬಕೆಟಿನಲ್ಲಿ ಮುಳುಗಿಸಿ ಕೊಲೆ ಮಾಡಿರುತ್ತಾನೆಂದು ತಿಳಿದುಬಂದ ವಿಚಾರವನ್ನು ಪೋಲೀಸರಲ್ಲಿ ಈಗ ಓದಿ ಹೇಳಿದ ನಿಪಿ.24 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

6. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರವಾಗಿಃ

7. ಇಲ್ಲ

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ